KRV-Bg. GPO-25

# ಕರ್ನಾಟಕ ರಾಜ್ಯ ಪತ್ರ


**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**

**ಭಾಗ – ೪ ಸೆಕ್ಷನ್ ೨ – ಸಿ (i)**

| | |
|---|---|
| **ಬೆಂಗಳೂರು, ಶುಕ್ರವಾರ, ಮೇ೧೦, ೧೯೯೬**<br>**(ವೈಶಾಖ ೨೦, ಶಕ ವರ್ಷ ೧೯೧೮)** | **ಸಂಖ್ಯೆ ೭೦೩** |


## ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ

## ಅಧಿಸೂಚನೆ

**ಕ್ರಮಾಂಕ. ಸಂಕಇ ೧೭೭ ಕೆಓಎಲ್ ೯೪, ಬೆಂಗಳೂರು, ದಿನಾಂಕ ೮ನೇ ಮೇ ೧೯೯೬**

ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿಯಮಗಳು ೧೯೯೬ರ ಕರಡನ್ನು ೧೯೯೪ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ (೧೯೯೪ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೮)ದ ೨೬ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ೧೯೯೬ ಮಾರ್ಚ್ ೧೧ನೇ ದಿನಾಂಕದ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ ೪–ಸೆಕ್ಷನ್ ೨–ಸಿ (೧) ಭಾಗದಲ್ಲಿ ಸಂಖ್ಯೆ ಸಂಕಇ ೧೭೭ ಕೆಓಎಲ್ ೯೪, ದಿನಾಂಕ ೬ನೇ ಮಾರ್ಚ್ ೧೯೯೬ ಅಧಿಸೂಚನೆಯಲ್ಲಿ ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿದ್ದರಿಂದ;

ಮತ್ತು ಸದರಿ ರಾಜ್ಯ ಪತ್ರವನ್ನು ದಿನಾಂಕ ೧೧ನೇ ಮಾರ್ಚ್ ೧೯೯೬ ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದುದರಿಂದ, ಮತ್ತು ಆ ಬಗ್ಗೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಸ್ವೀಕೃತವಾಗಿಲ್ಲದಿರುವುದರಿಂದ ಈಗ ೧೯೯೪ರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ (೧೯೯೪ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೮)ದ ೨೬ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

# ಅಧ್ಯಾಯ – I

## ಪ್ರಾರಂಭಿಕ

**೧. ಹೆಸರು ಮತ್ತು ಪ್ರಾರಂಭ –**

(೧) ಈ ನಿಯಮಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಿಯಮಗಳನ್ನು, ೧೯೬೬ ಎಂದು ಕರೆಯತಕ್ಕದ್ದು.

(೨) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**೨. ಪರಿಭಾಷೆಗಳು –**

(೧) **ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು –**

i. 'ಅಧಿನಿಯಮ' ಎಂದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, ೧೯೯೪

ii. 'ಪ್ರಕರಣ' ಎಂದರೆ ಈ ಅಧಿನಿಯಮದ ಪ್ರಕರಣ.

iii. 'ನಮೂನೆ' ಎಂದರೆ ನಿಯಮಗಳಿಗೆ ಲಗತ್ತಿಸಲಾದ ನಮೂನೆ.

iv. 'ಹಣಕಾಸು ವರ್ಷ ಅಥವಾ ವರ್ಷ' ಎಂದರೆ ಪ್ರತಿವರ್ಷ ಏಪ್ರಿಲ್ ೧ನೇ ದಿನಾಂಕದಿಂದ ಪ್ರಾರಂಭವಾಗಿ ಮಾರ್ಚ್ ೩೧ನೇ ದಿನಾಂಕಕ್ಕೆ ಕೊನೆಗೊಳ್ಳುವ ಒಂದು ವರ್ಷದ ಅವಧಿ.

v. 'ಸಭೆ' ಎಂದರೆ ಪ್ರಾಧಿಕಾರದ ಸಭೆ ಅಥವಾ ಪ್ರಾಧಿಕಾರದ ಉಪ ಸಮಿತಿಯ ಸಭೆ.

(೨) ಈ ನಿಯಮಗಳಲ್ಲಿ ಉಪಯೋಗಿಸಿದ, ಆದರೆ ಅರ್ಥ ವಿವರಣೆ ನೀಡಿರದ ಪದಗಳು ಹಾಗೂ ಪದಾವಳಿಗಳು ಅವುಗಳಿಗೆ ಅಧಿನಿಯಮದಲ್ಲಿ ಅನುಕ್ರಮವಾಗಿ ಕೊಟ್ಟ ಅರ್ಥವನ್ನೇ ಹೊಂದಿರತಕ್ಕದ್ದು.

# ಅಧ್ಯಾಯ – II

## ಸಾಮಾನ್ಯ ಉಪಬಂಧಗಳು

**೩. ಅಧ್ಯಕ್ಷರ ಭತ್ಯೆಗಳು:**

ಪ್ರಾಧಿಕಾರದ ಅಧ್ಯಕ್ಷರಿಗೆ ಸಂದಾಯ ಮಾಡಬೇಕಾದ ಭತ್ಯೆ, ೧೯೫೭ರ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ (೧೯೫೭ರ ಕರ್ನಾಟಕ ಅಧಿನಿಯಮ ೫) ಮೇರೆಗೆ ಸಂಪುಟ ದರ್ಜೆ ಸಚಿವರಿಗೆ ಸಂದಾಯ ಮಾಡುವ ಮೊತ್ತಕ್ಕೆ ಸರಿಸಮವಾಗಿರತಕ್ಕದ್ದು.

**೪. ಸದಸ್ಯರ ಭತ್ಯೆಗಳು ಇತ್ಯಾದಿ:**

ಅಧ್ಯಕ್ಷನಲ್ಲದ ಪ್ರಾಧಿಕಾರದ ಪ್ರತಿಯೊಬ್ಬ ಸರ್ಕಾರೇತರ ಸದಸ್ಯನು,–

(೧) ಪ್ರಾಧಿಕಾರದ ಸಭೆ: ಉಪ ಸಮಿತಿ ಸಭೆಗಳಿಗೆ ಹಾಜರಾಗುವುದಕ್ಕೆ ಆಗಿಂದಾಗ್ಗೆ ಸರ್ಕಾರವು ಅಧಿಕಾರೇತರ ಸದಸ್ಯರಿಗೆ ಅನುಮತಿಸಬಹುದಾದಂಥ ದರದಲ್ಲಿ ಪ್ರಯಾಣ ಭತ್ಯೆಯನ್ನು ಮತ್ತು ಉಪಸ್ಥಿತಿ ಭತ್ಯೆಯನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೨) ಪ್ರಕರಣ ೧೩ರ ಅನ್ವಯ ನಡೆದುಕೊಂಡ ತಜ್ಞರ ಸೇವೆಗಾಗಿ ಅವರಿಗೆ ಸಂದಾಯ ಮಾಡತಕ್ಕ ಭತ್ಯೆಗಳು ಪ್ರಾಧಿಕಾರದ ಸದಸ್ಯರಿಗೆ ಸಂದಾಯ ಮಾಡತಕ್ಕಂಥದರಲ್ಲಿರತಕ್ಕದ್ದು ಮತ್ತು ಅವರಿಗೆ ಸಂದಾಯವಾಗತಕ್ಕಂತಹ ಗೌರವಧನ ಆಗಿಂದಾಗ್ಗೆ ಪ್ರಾಧಿಕಾರವು ನಿಗಧಿಪಡಿಸಬಹುದಾದಂತಹ ದರದಲ್ಲಿರತಕ್ಕದ್ದು.

**೫. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು:**

(೧) ಕಾರ್ಯದರ್ಶಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಅಧಿನಿಯಮ ಅಥವಾ ಯಾವುದೇ ಕಾನೂನಿನಿಂದ ಅಥವಾ ಮೇರೆಗೆ ತನಗೆ ಪ್ರದತ್ತವಾದ ಅಥವಾ ವಹಿಸಿಕೊಡಲಾದಂಥ ಅಧಿಕಾರಗಳನ್ನು ಚಲಾಯಿಸುವುದರ ಜೊತೆಗೆ ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸುವುದರ ಜೊತೆಗೆ–

(ಎ) ಪ್ರಾಧಿಕಾರದ ಪ್ರತಿಯೊಂದು ಸಭೆ ಮತ್ತು ಉಪಸಭೆಗೆ ಹಾಜರಾಗಲು ಮತ್ತು ವ್ಯವಹರಣೆಯಲ್ಲಿ ಭಾಗಿಯಾಗಲು ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಮತ ನೀಡುವುದಕ್ಕೆ ಹಕ್ಕುಳ್ಳವನಾಗಿರತದ್ದುದ್ದಲ್ಲ.

(ಬಿ) ಪ್ರಾಧಿಕಾರದ ಪ್ರತಿಯೊಂದು ಸಭೆಯ ನಡವಳಿಕೆಯ ಸಂಕ್ಷಿಪ್ತ ದಾಖಲೆಯನ್ನು ದಾಖಲು ಮಾಡತಕ್ಕುದು ಅಥವಾ ದಾಖಲು ಮಾಡುವಂತೆ ಮಾಡತಕ್ಕದ್ದು.

(ಸಿ) ಸಭೆಯಲ್ಲಿ ಮಂಡಿಸಲಾದ ಅಥವಾ ಯಾವುದೇ ಗೊತ್ತುವಳಿ ಅಥವಾ ಎತ್ತಲಾದ ಪ್ರಶ್ನೆಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯವನ್ನು ಅಥವಾ ಯಾವುದೇ ಸ್ಪಷ್ಟೀಕರಣವನ್ನು ಒದಗಿಸತಕ್ಕದ್ದು;

(ಡಿ) ಪ್ರಾಧಿಕಾರದ ಎಲ್ಲ ಗೊತ್ತುವಳಿಗಳು ಮತ್ತು ಆದೇಶಗಳನ್ನು ಜಾರಿಗೊಳಿಸತಕ್ಕದ್ದು.

ಆದರೆ ಗೊತ್ತುವಳಿಗಳು ಅಥವಾ ಆದೇಶಗಳನ್ನು ಜಾರಿಗೆ ತರುವಲ್ಲಿ ಇಲ್ಲಿ ತೊಂದರೆಗಳು ಇರುತ್ತವೋ ಅಲ್ಲಿ ಅದನ್ನು ಪ್ರಾಧಿಕಾರಕ್ಕೆ ಅದರ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು ಮತ್ತು ಪ್ರಾಧಿಕಾರದ ನಿರ್ದೇಶನಗಳಿಗನುಸಾರವಾಗಿ ನಡೆಯತಕ್ಕದ್ದು;

(ಇ) ಪ್ರಾಧಿಕಾರದ ಎಲ್ಲ ಅಧಿಕಾರಿಗಳ ಮತ್ತು ಸಿಬ್ಬಂದಿ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹೊಂದಿರತಕ್ಕದ್ದು.

(ಎಫ್) ಪ್ರಾಧಿಕಾರದ ಸಭೆಯ ವ್ಯವಹರಣೆಗಳಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳು ಮತ್ತು ಪ್ರಾಧಿಕಾರದ ಮೇರೆಗೆ ಅಥವಾ ಅವರ ಸ್ವಂತ ಅಧಿಕಾರದ ಮೇರೆಗೆ ನಡೆಸಿದ ಪತ್ರ ವ್ಯವಹಾರಗಳ ಅಭಿರಕ್ಷಣೆಯನ್ನು ಹೊಂದಿರತಕ್ಕದ್ದು;

## ಅಧ್ಯಾಯ – III

**೬. ಪ್ರಾಧಿಕಾರದ ನೌಕರರು:–**

(೧) ಪ್ರಾಧಿಕಾರದಲ್ಲಿರುವ ಮಂಜೂರಾದ ಪ್ರತಿಯೊಂದು ಹುದ್ದೆಯನ್ನು ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಭಾರತದ ಇತರ ಯಾವುದೇ ರಾಜ್ಯ ಸರ್ಕಾರದ ನೌಕರರನ್ನು ಅಥವಾ ಯಾವುದೇ ಸ್ವಾಯತ್ತ ಸಂಸ್ಥೆಯ ನೌಕರರನ್ನು ಪ್ರತಿನಿಯೋಜನೆ ಮೂಲಕ ಭರ್ತಿ ಮಾಡತಕ್ಕದ್ದು;

ಆದರೆ, ಪ್ರಾಧಿಕಾರದ ಅಧ್ಯಕ್ಷರ ಆಪ್ತ ಶಾಖೆಗೆ, ಅವರಿಗೆ ರಾಜ್ಯ ಸರ್ಕಾರವು ಘೋಷಿಸಲಾದ ಸ್ಥಾನಮಾನಗಳಿಗೆ ಅನುಗುಣವಾಗಿ ಸರ್ಕಾರವು ನಗಧಿಸಬಹುದಾದ ಮಾದರಿ ಮತ್ತು ಮಿತಿಯಂತೆ ಆಪ್ತ ಸಿಬ್ಬಂಧಿಯನ್ನು ಗುತ್ತಿಗೆ ಆಧಾರದ ಮೇರೆಗೆ ಅಧ್ಯಕ್ಷರ ಅಧಿಕಾರಾವಧಿಯನ್ನು ಮೀರದಂತೆ ನೇಮಿಸಿಕೊಳ್ಳತಕ್ಕದ್ದು.

## ಅಧ್ಯಾಯ – IV

**೭. ಪ್ರಾಧಿಕಾರದ ನಿಧಿಯ ವರಮಾನ ಮತ್ತು ವೆಚ್ಚ:**

(೧) ಪ್ರಾಧಿಕಾರದ ನಿಧಿಗೆ ಸಂದಾಯವಾಗತಕ್ಕ ಎಲ್ಲ ಮೊತ್ತವನ್ನು ಪ್ರಾಧಿಕಾರವು ನಿಗಧಿಪಡಿಸಬಹುದಾದ ಅನುಸೂಚಿತ ಬ್ಯಾಂಕಿನಲ್ಲಿ ಪ್ರಾಧಿಕಾರದ ಲೆಕ್ಕಕ್ಕೆ ಜಮಾ ಮಾಡತಕ್ಕದ್ದು.

(೨) ವಾರ್ಷಿಕ ಲೆಕ್ಕಗಳೂ ಸೇರಿದಂತೆ ಪ್ರಾಧಿಕಾರದ ನಿಧಿಯ ಆದಾಯ ಮತ್ತು ವೆಚ್ಚಗಳ ಲೆಕ್ಕಪತ್ರಗಳನ್ನು ಸರ್ಕಾರವು ನೀಡುವ ಯಾವುದೇ ನಿರ್ದೇಶನಕ್ಕೊಳಪಟ್ಟು, ರಾಜ್ಯ ಲೆಕ್ಕಪತ್ರ ಇಲಾಖೆಯವರ ಸಲಹೆ ಮೇರೆಗೆ ಕಾರ್ಯದರ್ಶಿಯವರು ಅಳವಡಿಸಿದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಇಡತಕ್ಕದ್ದು.

(೩) ಪ್ರಾಧಿಕಾರದ ನಿಧಿಯಿಂದ ವೆಚ್ಚವನ್ನು ಸರ್ಕಾರವು ನಿರ್ಧಿಷ್ಟಪಡಿಸಿದ ಸಂಬಂಧಪಟ್ಟ ನಿಯಮಗಳು ಮತ್ತು ಪ್ರಕ್ರಿಯೆಗಳಿಗನುಸಾರವಾಗಿ ಭರಿಸತಕ್ಕದ್ದು.

(೪) ಪ್ರಾಧಿಕಾರವು ಸಾಧ್ಯವಾದಷ್ಟು ಮಟ್ಟಿಗೆ ಹಣಕಾಸು ವರ್ಷ ಮುಕ್ತಾಯವಾದ ತರುವಾಯ ನಡೆಯುವ ಮೊದಲನೇ ಸಭೆಯಲ್ಲಿ ಆ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಸತಕ್ಕದ್ದು. ಈ ವಾರ್ಷಿಕ ಲೆಕ್ಕಪತ್ರಗಳನ್ನು , ಅಳವಡಿಸಿಕೊಂಡ ನಮೂನೆಯಲ್ಲಿ ಪ್ರಾಧಿಕಾರವು ತಯಾರಿಸತಕ್ಕದ್ದು ಮತ್ತು ಅಂಗೀಕರಿಸತಕ್ಕದ್ದು.

(೫) ಪ್ರಾಧಿಕಾರವು ತಾನು ಅಂತಿಮವಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ಅಂಗೀಕರಿಸಿದ ಕೂಡಲೇ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

## ಅಧ್ಯಾಯ – V

**೮. ಪ್ರಾಧಿಕಾರದ ಆಯವ್ಯಯ:**

(೧) ಪ್ರತಿಯೊಂದು ಹಣಕಾಸು ವರ್ಷದ ಆಯವ್ಯಯ ಅಂದಾಜುಗಳನ್ನು ಅನುಬಂಧದಲ್ಲಿ ಸೂಚಿಸಲಾದ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಅವುಗಳನ್ನು ಪ್ರಾಧಿಕಾರದ ಮುಂದೆ ಮಂಡಿಸತಕ್ಕದ್ದು. ಪ್ರಾಧಿಕಾರವು ಅದನ್ನು ಅನುಮೋದಿಸಿ ತರುವಾಯ ಅವುಗಳನ್ನು ರಾಜ್ಯ ಸರ್ಕಾರ ನಿಗಧಿಪಡಿಸಿದ ದಿನಾಂಕದೊಳಗೆ ರಾಜ್ಯ ಸರ್ಕಾರ ಅನುಮೋದನೆಗಾಗಿ ಕಳುಹಿಸಿಕೊಡತಕ್ಕದ್ದು.

(೨) ಸರ್ಕಾರ ಅನುಮೋದಿಸಿದ ಆಯವ್ಯಯ ಆ ಹಣಕಾಸು ವರ್ಷಕ್ಕಾಗಿ ಪ್ರಾಧಿಕಾರದ ಆಯವ್ಯಯವಾಗಿರತಕ್ಕದು ಮತ್ತು ಅದನ್ನು ಪ್ರಾಧಿಕಾರದ ಮೊಹರಿನೊಂದಿಗೆ ಮತ್ತು ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಪ್ರಾಧಿಕಾರದ ಅಧಿಕಾರಿಗಳ ರುಜುವಿನೊಂದಿಗೆ ಹೊರಡಿಸತಕ್ಕದ್ದು.

(೩) ಅನುಮೋದಿಸಿದ ಆಯವ್ಯಯದಲ್ಲಿ ಒದಗಿಸಿರುವ ಮೊತ್ತಕ್ಕಿಂತ ಹೆಚ್ಚಿನ ವೆಚ್ಚವನ್ನು ವಹಿಸುವುದು ಅವಶ್ಯವಾದರೆ ಪ್ರಾಧಿಕಾರವು ಪ್ರಸ್ತಾವಿತ ವೆಚ್ಚದ ವಿವರಗಳನ್ನು ಕೂಡಲೇ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

## ಅಧ್ಯಾಯ – VI

**೯. ವರದಿಗಳು:**

ಸರ್ಕಾರವು ಸೂಚಿಸಬಹುದಾದ ವಿಷಯಗಳನ್ನೊಳಗೊಂಡಂತೆ ಪ್ರಾಧಿಕಾರವು ಯೋಚಿಸಿದ, ಕೈಗೊಂಡ ಮತ್ತು ಪೂರ್ಣಗೊಳಿಸಿದ ಪ್ರಧಾನ ಕಾರ್ಯಚಟುವಟಿಕೆಗಳು, ಹಣಕಾಸು ಪರಿಸ್ಥಿತಿ, ಸಿಬ್ಬಂಧಿ ಮತ್ತು ಅಧಿಕಾರಿಗಳು ಮತ್ತು ಇತರ ಅದೇ ಬಗೆಯ ವಿಷಯಗಳನ್ನೊಳಗೊಂಡ ವಾರ್ಷಿಕ ಆಡಳಿತ ವರದಿಯನ್ನು ಸದ್ಧಪಡಿಸಿ ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯತಕ್ಕದ್ದು ಮತ್ತು ಸರ್ಕಾರದ ನಿಗಧಿಪಡಿಸಿದ ದಿನಾಂಕದೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು**
**ಅವರ ಹೆಸರಿನಲ್ಲಿ**

**ಸಹಿ/–**
**ಅ.ರಾ. ಚಂದ್ರಹಾಸಗುಪ್ತ**
**ಸರ್ಕಾರದ ಕಾರ್ಯದರ್ಶಿ**
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ.**

ಸಂಖ್ಯೆ: ಸಂಕಇ ೧೭೭ ಕೆಓಎಲ್ ೯೪                                   ದಿನಾಂಕ: ೮ನೇ ಮೇ ೧೯೯೬

**ಪ್ರಪತ್ರ**

**ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬಜೆಟ್ (ಆಯವ್ಯಯ ತಃಖ್ತೆ)**

**(ನಿಯಮ ೮ (೧) ನೋಡಿ)**

| ಲೆಕ್ಕ ಶೀರ್ಷಿಕೆ | ಹಿಂದಿನ ವರ್ಷದ () ವಾಸ್ತವಿಕ ವೆಚ್ಚ | ಪ್ರಸಕ್ತ ವರ್ಷಕ್ಕಾಗಿ (೧೯ –೧೯ ) ಮಂಜೂರಾದ ಅಂದಾಜು | ಪ್ರಸಕ್ತ ವರ್ಷಕ್ಕಾಗಿ (೧೯ –೧೯ ) ಪರಿಷ್ಕೃತ ಅಂದಾಜು | ಮುಂದಿನ ವರ್ಷಕ್ಕೆ (೧೯ – ೧೯ ) ಅಂದಾಜು | ಹೆಚ್ಚಳಕ್ಕೆ ಅಥವಾ ಇಟ್ಟಿರತಕ್ಕ ಕಾರಣ |
|---|---|---|---|---|---|

**ಆಯವ್ಯಯ ಸಾರಾಂಶ**

**ಭಾಗ – ೧**

(೧) ಪ್ರಾರಂಭಿಕ ಶಿಲ್ಕು
(೨) ಸ್ವೀಕೃತಿಗಳು (ವಿವರಗಳನ್ನು ನೋಡಿ)
(೩) ವೆಚ್ಚ
(೪) ಅಂತಿಮ ಶಿಲ್ಕು

**ಭಾಗ–೨**

(೧) ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರಿಗೆ ಮಾಸಿಕ ಸಂಬಳ/ಭತ್ಯೆಗಳು
(೨) ಕಾರ್ಯದರ್ಶಿಗೆ ಮಾಸಿಕ ಸಂಬಳ ಮತ್ತು ಭತ್ಯೆಗಳು
(೩) ಇತರ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾಸಿಕ ಸಂಬಳಗಳು ಮತ್ತು ಭತ್ಯೆಗಳು
(೪) ಪ್ರವಾಸ ಭತ್ಯೆಗಳು
(೫) ಸಾದಿಲ್ವಾರು
(೬) ಪೀಠೋಪಕರಣಗಳು, ಸಾಧನ ಸಾಮಗ್ರಿಗಳು
(೭) ಲೇಕನ ಸಾಮಗ್ರಿ/ಪುಸ್ತಕ/ರಿಜಿಸ್ಟರ್‌ಗಳು ಇತ್ಯಾದಿ ಖರೀದಿ
(೮) ಬಾಡಿಗೆ
(೯) ದೂರವಾಣಿ
(೧೦) ಅಂಚೆ ವೆಚ್ಚ
(೧೧) ಮುದ್ರಣ ವೆಚ್ಚಗಳು
(೧೨) ಜಾಹೀರಾತುಗಳು
(೧೩) ಲೆಕ್ಕ ಪರಿಶೀಲನೆ ವೆಚ್ಚಗಳು
(೧೪) ಇತರೆ ಬಾಬ್ತುಗಳು
(೧೫) ಯೋಜನೆಗಳ/ಕಾರ್ಯಕ್ರಮಗಳ ಮೇಲಿನ ವೆಚ್ಚಗಳು

ಅ.ರಾ. ಚಂದ್ರಹಾಸಗುಪ್ತ
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ.